

ವೀರಾವೇಶದಿಂದ ಡೌಲು ಕೊಚ್ಚಿಕೊಳ್ಳುತ್ತಿದ್ದರು. ಆದರೆ, ಅಕ್ಕಯ್ಯಮ್ಮ ಮಾತ್ರ ಎಲ್ಲೂ ತಿರುಗಾಡದೆ ಎಲೆಕ್ಷನ್ ಮುಗಿಯುವವರೆಗೂ ತನ್ನ ಅಂಗಡಿಗೆ ಬರುವವರೆಲ್ಲ ಪುಗಸಟ್ಟೆಯಾಗಿ ಆಮ್ಲೇಟ್ ತಿನ್ನಬಹುದೆಂದು ಅನೌನ್ಸ್ ಮಾಡಿದಳು. ಮಧ್ಯಾಹ್ನ ಹನ್ನೆರಡು ಗಂಟೆಯಿಂದ ನಾಲ್ಕು ಗಂಟೆಯವರೆಗೆ ಮತ್ತು ಸಂಜೆ ಆರುಗಂಟೆಯಿಂದ ರಾತ್ರಿ ಎಂಟೂವರೆ ಗಂಟೆಯವರೆಗೂ ಅಕ್ಕಯ್ಯಮ್ಮನ ಅಂಗಡಿಯ ಮುಂದೆ ಜನ ಗಿಜಿಗುಡತೊಡಗಿದ್ದರು. ಬಂದವರೆಲ್ಲ ಎರಡು ಮೂರು ಆಮ್ಲೇಟ್ ಜಡಿಯುತ್ತಿದ್ದರು. ''ಅಕ್ಕಯ್ಯಮ್ಮ ನೀನೇನು ಅನುಮಾನಾನೇ ಇಟ್ಕೊಬೇಡ, ನಮ್ಮ ಮನೇಲಿರೊ ನಾಲ್ಕು ಓಟು ನಿಂದೇನೆ. ಯಾರು ತಿಪ್ಪರಲಾಗ ಹಾಕಿದ್ರೂ ನೀನು ಗೆಲ್ಲೋದನ್ನ ತಡ್ಯೋಕಾಗಲ್ಲ.'' ''ಅಕ್ಕಯ್ಯಮ್ಮ ರಂಗನಾಥ್ ಸ್ವಾಮಿ ನಿನ್ನ ಭಾಗಕ್ಕೆ ಬಂದವ್ನೆ. ಗ್ಯಾರಂಟಿ ನೀನು ಗೆಲ್ತೀಯ. ಮುಂದಕ್ಕೆ ತಾಲ್ಲೂಕು ಪಂಚಾಯ್ತಿಗೂ ನೀನು ನಿಂತ್ಕಂಬ್ತೀಯ ನೋಡ್ತಿರು. ನನ್ನ ನಾಲಿಗೆ ಮೇಲೆ ಮಚ್ಚೆ ಐತೆ, ಈ ಮಾತು ಸುಳ್ಳಾದ್ರೆ ಕೇಳು...'' ''ಒಳ್ಳೇರ್ಗೆ ಯಾವೊತ್ತೂ ಒಳ್ಳೇದೆ ಆಗ್ತೈತೆ. ನಮ್ಮ ಅಕ್ಕಯ್ಯಮ್ಮ ಯಾರಿಗೆ ಏನು ಅನ್ಯಾಯ ಮಾಡೆವ್ಳೇಳ್ರಿ...'' ''ಒಬ್ಬಂಟಿ ಹೆಂಗ್ಸು, ಅಕ್ಕಯ್ಯಮ್ಮನಿಗೆ ಯಾವ ಆಸ್ತಿ ಬೇಕು, ಯಾವ ಅಂತಸ್ತು ಬೇಕು. ಹಾಗಾಗಿ, ರಾಜಕೀಯದಿಂದ ಅಕ್ಕಯ್ಯಮ್ಮ ದುಡ್ಡು ಮಾಡೋದು ದೂರದ ಮಾತು. ಊರಿನ ಅಭಿವೃದ್ಧಿಗೆ ನಿಯತ್ತಿನಿಂದ ಕೆಲ್ಸ ಮಾಡ್ತಾಳೆ ನಮ್ಮಕ್ಕಯ್ಯಮ್ಮ...'' ''ಅಕ್ಕಯ್ಯಮ್ಮ ಈಗಾಗಲೇ ರಿಸಲ್ಟ್ ಬಂದಿದೆ ಅಂತ ತಿಳ್ಕೊ. ಗೆದ್ದ ಮೇಲೆ ನೀನು ಬಡಬಗ್ಗರನ್ನ ಬಿಲ್ಕುಲ್ ಮರೆಯಲ್ಲ ಅನ್ನೋ ನಂಬಿಕೆ ನಮ್ಗೆಲ್ಲ ಐತೆ...'' ಮುಂತಾಗಿ ಜನ ಅಕ್ಕಯ್ಯಮ್ಮನಲ್ಲಿ ಆತ್ಮವಿಶ್ವಾಸ ತುಂಬುತ್ತಾ ಆಮ್ಲೇಟುಗಳನ್ನು ಆಸ್ವಾದಿಸುವ ಕೆಲಸದಲ್ಲಿ ನಿರತರಾಗಿದ್ದರು. ಬೇರೆ ಅಭ್ಯರ್ಥಿಗಳು ತಮ್ಮ ಬೆಂಬಲಿಗರಿಗೆ ತಮ್ಮ ತಮ್ಮ ಮನೆಗಳ ಬಳಿಯೇ ಉಪ್ಪಿಟ್ಟು, ಚಿತ್ರಾನ್ನ, ಪಲಾವ್, ಕಾಫಿಗಳ ಸಮಾರಾಧನೆ ಇಟ್ಟುಕೊಂಡಿದ್ದರು. ಆದರೆ, ಊರಿನ ಪ್ರತಿಯೊಬ್ಬ ಗಂಡಸೂ ಪ್ರತಿದಿನ ಒಮ್ಮೆಯಾದರೂ ಅಕ್ಕಯ್ಯಮ್ಮನ ಆಮ್ಲೇಟ್ ಅಂಗಡಿಗೆ ಅಟೆಂಡೆನ್ಸ್ ಹಾಕಿಯೇ ತೀರುತ್ತಿದ್ದರು. ರಾಮದಾಸಪ್ಪ, ನಾಗರೆಡ್ಡಿ, ದೇವರಾಜಪ್ಪ, ಮರೀರಪ್ಪ ಮುಂತಾದ ಹಳೆ ಪಾರ್ಟಿಯ ಲೀಡರ್ರುಗಳು ಎದುರು ಸಿಕ್ಕಿದವರಿಗೆಲ್ಲಾ ಅಕ್ಕಯ್ಯಮ್ಮನಿಗೆ ಸಪೋರ್ಟ್ ಮಾಡಲು ಹೇಳುತ್ತಿದ್ದರು.

ಅಕ್ಕಯ್ಯಮ್ಮ ಗ್ಯಾರಂಟಿ ಗೆದ್ದೇ ಗೆಲ್ಲುತ್ತಾಳೆ ಎನ್ನುವ ವಾತಾವರಣ ನಿರ್ಮಾಣವಾಗಿತ್ತು. ಇನ್ನೇನು ಎಲೆಕ್ಷನ್ ಮೂರು ದಿನ ಇರುವಂತೆ ಪೊಲೀಸ್ ನಂಜುಂಡ ಹೊಸ ವರಸೆಯನ್ನು ಶುರುಮಾಡಿದ್ದ. ಎಲ್ಲರ ಮನೆಗಳಿಗೂ ಭೇಟಿ ನೀಡಿ, ''ಆ ಅಕ್ಕಯ್ಯಮ್ಮನ ಜಾತಿ ಮನೆಗಳು ಎಷ್ಟವೆ ನಮ್ಮೂರಲ್ಲಿ. ಮನೆಗಳಿರಲಿ, ಗೊಲ್ಲರ ಜಾತಿಗೆ ಸೇರಿದೋಳು ಅವಳೊಬ್ಬಳೆ. ಅಂಥೋಳು ಊರು ತುಂಬಾ ಇರೋ ನಮ್ಮ ಜಾತಿನ ಆಳ್ಬೇಕಾ. ಇದು ಎಂಥ ನ್ಯಾಯ...'' ''ಅಕ್ಕಯ್ಯಮ್ಮನಿಗೆ ಯಾವ ರಾಜಕೀಯ ಜ್ಞಾನ ಐತೆ. ಮೀಟಿಂಗ್ನಲ್ಲಿ ಮಾತಾಡೋಕೆ ಬರುತ್ತಾ ಇಲ್ಲ, ಊರಿಗೆ ಇಂಥಾದ್ದು ಬೇಕು ಅಂದ್ರೆ ವಾದ ಮಾಡಿ ತರೋಕೆ ಬರುತ್ತಾ ನೀವೆ ಯೋಚ್ನೆ ಮಾಡಿ...'' ''ಆಮ್ಲೇಟ್ ವ್ಯಾಪಾರ ಘನವಾಗಿ ನಡಿತಾ ಐತೆ. ಅಂಗಡಿ ಬಿಟ್ಟು ಆವಮ್ಮ ರಾಜಕೀಯವಾಗಿ ಓಡಾಡೋಕೆ ಎಲ್ಲಾಗ್ತೈತೆ. ಹೋಗ್ಲಿ ಸಪೋರ್ಟ್‌ಗೆ ಅಂತ ಗಂಡನಾದ್ರೂ ದಿಕ್ಕವ್ನ. ಯಾವ್ ಪುರುಷಾರ್ಥಕ್ಕೆ ಅಂತ ಆವಮ್ಮ ಎಲೆಕ್ಷನ್ನಿಗೆ ನಿಂತ್ಕೊಬೇಕು...'' ಮುಂತಾದ ವಾದಗಳನ್ನು ಮಂಡಿಸಿ ಜನರ ಮನಗಳಲ್ಲಿ ಮಂಡರಗಪ್ಪೆಗಳು ಓಡಾಡುವಂತೆ ಮಾಡುವುದರಲ್ಲಿ ಯಶಸ್ವಿಯಾದ. ನಿಜ, ಅಕ್ಕಯ್ಯಮ್ಮನ ಗಂಡನ ಕಡೆಯವರ ಮೂಲ ಗೊಲ್ಲರ ಹಟ್ಟಿ. ಗಂಡನ ಮುತ್ತಾತ ಯಾವುದೋ ಕಾರಣದಿಂದ ಗೊಲ್ಲರ ಹಟ್ಟಿಯನ್ನು ಬಿಟ್ಟು ಬಂದು ಇಲ್ಲೇ ನೆಲೆಯಾಗಿದ್ದ. ರಾಮದಾಸಪ್ಪ, ನಾಗರೆಡ್ಡಿ, ದೇವರಾಜಪ್ಪನವರ ಮುಂದೆಯೂ ಈ ವಿಷಯವನ್ನು ಇಟ್ಟು ಬಲವಾಗಿ ಚರ್ಚೆ ಮಾಡಿ, 'ಎಲಾ ಇವ್ನ ಅದೂ ನಿಜ ಅಲ್ವಾ...' ಎಂಬ ಆಲೋಚನೆ ಅವರ ತಲೆಗಳಲ್ಲೂ ಹುಟ್ಟುವಂತೆ ಮಾಡಿದ್ದ. ಜೊತೆಗೆ, ಈ ಸುದ್ದಿಯನ್ನು ಊರಿನ ಎಲ್ಲರ ಕಿವಿಗಳಿಗೂ